## ಸಾಧ್ಯವಿಲ್ಲ...



ಆದಾಗಲೇ ಶರಾಬು ಕುಡಿದು ತೂರಾಡುತ್ತಿದ್ದ ಗುಂಡ ಮತ್ತೊಂದು ಬಾರ್ ಒಳಗೆ ನುಗ್ಗಿ ಕುಡಿಯಲು ಕುಳಿತ. ಅಲ್ಲಿರುವ ಗ್ರಾಹಕರನ್ನು ಉದ್ದೇಶಿಸಿ, 'ನಾನೊಂದು ಸರ್ದಾರ್ಜಿ ಜೋಕ್ ಹೇಳುತ್ತೇನೆ ಕೇಳುವಿರಾ?' ಎಂದು ಕೇಳಿದ. ಪಕ್ಕದ ಟೇಬಲ್‌ನಲ್ಲಿ ಕೂತಿದ್ದವ ಜೋರು ದನಿಯಲ್ಲಿ, 'ನೀವು ಈಗಾಗಲೇ ಕುಡಿದಿರುವಿರೆಂದು ಗೊತ್ತು, ಆದರೂ ಹೇಳುತ್ತೇನೆ, ಈ ಬಾರ್‌ನ ಟೆಂಡರ್ ಮತ್ತು ಬೌನ್ಸರ್ ಇಬ್ಬರೂ ಸರ್ದಾರ್‌ಗಳು. ನಾನು ಕರಾಟೆಯಲ್ಲಿ ಬ್ಲಾಕ್ ಬೆಲ್ಟ್, ನನ್ನ ಪಕ್ಕದಲ್ಲಿ ಇರುವಾತ ವೇಟ್ ಲಿಫ್ಟರ್, ಆಕಡೆಯವ ಕುಸ್ತಿಪಟು. ಈ ಐದು ಜನ ಸರ್ದಾರ್‌ಗಳ ಸಮ್ಮುಖದಲ್ಲಿ ನೀವು ಆ ಸರ್ದಾರ್ಜಿ ಜೋಕ್ ಹೇಳುವುದಾದರೆ ಹೇಳಿ' ಎಂದ. ಒಂದು ಕ್ಷಣ ಸುಮ್ಮನೇ ಕೂತ ಗುಂಡ. ನಂತರ 'ಇಲ್ಲಪ್ಪ, ನನಗೆ ಒಂದು ಜೋಕ್ ಐದು ಸಾರಿ ಹೇಳಲು ಆಗುವುದಿಲ್ಲ' ಎಂದ.

**ರಮಣ್ ಶೆಟ್ಟಿ ರೆಂಜಾಳ್**



## ಹೆಂಡತಿ ಮತ್ತು ನಾದಿನಿ

ಗುಂಡನ ಗೆಳೆಯ ಕೇಳಿದ, 'ನಿನ್ನ ಹೆಂಡತಿ ಮತ್ತು ಅವಳ ತಂಗಿ ಅವಳಿಜವಳಿ ಅಂದ್ಯಲ್ಲ, ಅವರಿಬ್ಬರೂ ಒಂದೇ ತರಹ ಇರುವುದರಿಂದ ಅವರಲ್ಲಿ ನಿನ್ನ ಹೆಂಡತಿ ಯಾರೆಂದು ಹೇಗೆ ಗುರುತಿಸುತ್ತೀಯಾ?'

ಗುಂಡ ಹೇಳಿದ: 'ಅದೇನು ಮಹಾ! ಇಬ್ಬರಿಗೂ ಏಕಕಾಲದಲ್ಲಿ ಚಿವುಟಿ ನೋಡ್ತೀನಿ. ಕೋಪ ಮಾಡಿಕೊಂಡವಳು ನನ್ನ ಹೆಂಡತಿ, ನಗುವವಳು ನನ್ನ ನಾದಿನಿ.'

**ಶೋಭಾ ಪ್ರಮೋದ್**

ಚಿತ್ರಗಳು: ಗಣೇಶ ಆಚಾರ್ಯ